ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್‌ಕೇಸ್ ನಂಬರ್ : 252/2022**

**ಫ್ರಾಸಾ- 16 ಚಾಸಾ- 32**

ಸಾಕ್ಷಿದಾರರ ಹೆಸರುಃ : ಎಸ್ ಹೇಮಂತ್ ಕುಮಾರ್

ತಂದೆಯ ಹೆಸರುಃ : ಕೆ ಶಿವಕುಮಾರ್

ವಯಸ್ಸುಃ : 42 ವರ್ಷ

ಉದ್ಯೋಗಃ : ಪಿ ಐ ಬೆಸ್ಕಾಂ ಜಾಗ್ರತ ದಳ

ವಾಸ : ರಾಮನಗರ

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:11-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು ಜೂನ್ 2021ರಿಂದ ಅಕ್ಟೋಬರ್ 2022ರವರೆಗೆ ನಾನು ಆಲೂರು ಪಿ.ಎಸ್ ನಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 8-6-22ರಂದು ಚಾಸಾ-31ರವರಿಂದ ಯುಡಿಆರ್ ಪ್ರಕರಣ ಸಂಖ್ಯೆ 31/22ರ ಕಡತವನ್ನು ಸ್ವೀಕರಿಸಿರುತ್ತೇನೆ. ಸದರಿ ಯುಡಿಆರ್ ಪ್ರಕರಣದಲ್ಲಿ ಚಾಸಾ-1ರವರನ್ನು ವಿಚಾರಿಸಿದಾಗ ಸದರಿಯವರು ಕೊಲೆ ವಿಚಾರದ ಬಗ್ಗೆ ತಮ್ಮ ಹೇಳಿಕೆಯನ್ನು ಲಿಖಿತವಾಗಿ ನೀಡಿದರು. ಅದನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-1 ರಂತೆ ಸ್ವೀಕರಿಸಿ ಅದರ ಆಧಾರದಲ್ಲಿ ಠಾಣಾ ಮೊಕದ್ದಮೆ ಸಂಖ್ಯೆ155/22ರಂತೆ ಕೇಸು ದಾಖಲಿಸಿ ಪ್ರ.ವ.ವಯನ್ನು ನಿಪಿ-27ರಂತೆ ನ್ಯಾಯಾಲಯಕ್ಕೂ ಪ್ರತಿಯನ್ನು ಮೇಲಧಿಕಾರಿಗಳಿಗೂ ಸಲ್ಲಿಸಿದೆನು. ನಿಪಿ-1 ಮತ್ತು 27ರಲ್ಲಿ ನನ್ನ ರುಜುಗಳಿದ್ದು ನಿಪಿ-1(ಬಿ) ಮತ್ತು ನಿಪಿ-27(ಎ) ಎಂದು ಗುರುತಿಸಲಾಯಿತು.

ಅದೇ ದಿನ ಮಧ್ಯಾಹ್ನ 3-30 ರಿಂದ 4-00 ಗಂಟೆ ಸಮಯದಲ್ಲಿ ಚಾಸಾ-27ರವರು ಮರಣೋತ್ತರ ಪರೀಕ್ಷೆ ಸಮಯದಲ್ಲಿ ಶೇಖರಿಸಿದ ವಿಸೆರಾವನ್ನು ಮತ್ತು ಶವದ ಮೇಲಿದ್ದ ಬಟ್ಟೆಗಳನ್ನು ತಂದು ಹಾಜರುಪಡಿಸಿದ್ದನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-17ರಂತೆ ಚಾಸಾ-16ರವರ ಸಮಕ್ಷಮ ವಶಪಡಿಸಿಕೊಂಡೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-17(ಎ) ಎಂದು ಗುರುತಿಸಲಾಯಿತು. ಅದನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಬಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ಆ ಪಂಚನಾಮೆಯಲ್ಲಿ ವಶಪಡಿಸಿಕೊಂಡ ಬಟ್ಟೆ ಒಂದು ಬಿಳಿಮಿಶ್ರಿತ ಚೌಕಳಿಯ ಅಂಗಿ ಮತ್ತು ಒಂದು ಸಿಮೆಂಟ್ ಮತ್ತು ಕಪ್ಪು ಮಿಶ್ರಿತಬಣ್ಣದ ತುಂಬುತೋಳಿನ ಶರ್ಟ್ ಮತ್ತು ಕೆಂಪು ಬಣ್ಣದ ಕಾಚಾ ಆಗಿರುತ್ತದೆ. (ಮಾನ್ಯ ಅಭಿಯೋಜಕರು ನ್ಯಾಯಾಲಯದ ಮುಂದೆ ಇರುವ ಬಟ್ಟೆಯಿಂದ ಪ್ಯಾಕು ಮಾಡಿರುವ 3 ಪ್ಯಾಕೇಟನ್ನು ಒಡೆಯಲು ಅನುಮತಿ ಕೋರಿದ್ದು, ಅನುಮತಿ ನೀಡಿದೆ) ಬಟ್ಟೆಯಿಂದ ಪ್ಯಾಕು ಮಾಡಿದ 3 ಪ್ಯಾಕನ್ನು ತೆರೆದು ತೋರಿಸಿದಾಗ ಅದರೊಳಗಿರುವ ಬಟ್ಟೆಗಳನ್ನು ಅದೇ ಎಂದು ಗುರುತಿಸಿರುತ್ತಾರೆ. ಲುಂಗಿಯನ್ನು ಎಂ.ಓ.7 ಎಂದು ಶರ್ಟನ್ನು ಎಂ.ಓ.8 ಎಂದು ಕಾಚಾವನ್ನು ಎಂ.ಓ.9 ಎಂದು ಗುರುತಿಸಲಾಯಿತು. ಅದನ್ನುಮಾಲುಪಟ್ಟಿಯಲ್ಲಿ ಸೇರಿಸಿ  ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಚಾಸಾ-27 ಮತ್ತು 28ರವರ ಹೇಳಿಕೆ ಮಾಡಿಕೊಂಡಿರುತ್ತೇನೆ.

3.ದಿನಾಂಕ 9-6-22ರಂದು ಸಿಬ್ಬಂದಿಗಳಾದ ರೇವಣ್ಣ ಮತ್ತು ಮಧುರವರನ್ನು ಆರೋಪಿ ಪತ್ತೆಗಾಗಿ ನೇಮಕ ಮಾಡಿದ್ದೆನು. ಸದರಿಯವರು ಆರೋಪಿತರನ್ನು ಪತ್ತೆ ಹಚ್ಚಿ ಬೆಳಿಗ್ಗೆ 9 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿದರು. ಆರೋಪಿತರನ್ನು ವಿಚಾರಿಸಿ ಸ್ವಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಸದರಿ ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ತನ್ನನ್ನು ಕರೆದುಕೊಂಡು ಹೋದರೆ ಆನಂದನನ್ನು ಕೊಲೆ ಮಾಡಿದ ಸ್ಥಳ ಮತ್ತು ಕೃತ್ಯಕ್ಕೆ ಬಳಸಿದ ಸುತ್ತಿಗೆಯನ್ನು ತೋರಿಸಿ ಸುತ್ತಿಗೆಯನ್ನು ಹಾಜರುಪಡಿಸುವುದಾಗಿ ಹೇಳಿದರು. ಸದರಿ ಸ್ವಇಚ್ಛಾ

ಹೇಳಿಕೆಯ ಭಾಗವನ್ನು ನಿಪಿ-28 ಎಂದು ಗುರುತಿಸಲಾಯಿ. ಅದಕ್ಕೆ ಆರೋಪಿತರ ರುಜು ಪಡೆದಿದ್ದು ಅದಕ್ಕೆ ನಾನೂ ಕೂಡ ರುಜು ಹಾಕಿರುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು ಕ್ರಮವಾಗಿ ನಿಪಿ-28(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ನನ್ನ ಮುಂದೆ ಹಾಜರುಪಡಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು. ಅದೇ ಸಮಯದಲ್ಲಿ ಆರೋಪಿ ತಾನು ಕೃತ್ಯಸಮಯದಲ್ಲಿ ಧರಿಸಿದ್ದ ಟೀಶರ್ಟ್ ಎಂದು ಹೇಳಿ ನನ್ನ ಮುಂದೆ ಹಾಜರುಪಡಿಸಿದ್ದನ್ನು ಚಾಸಾ-13 ಮತ್ತು 14 ರವರ ಸಮಕ್ಷಮ ನಿಪಿ-11ರ ಮಹಜರ್ ಮೂಲಕ ವಶಪಡಿಸಿಕೊಂಡೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-11(ಸಿ) ಎಂದು ಗುರುತಿಸಲಾಯಿತು. ಅದನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆ ಶರ್ಟನ್ನು ನೋಡಿದರೆ ಗುರುತಿಸುತ್ತೇನೆ. ಅದು ನ್ಯಾಯಾಲಯದ ಮುಂದಿರುವ ಎಂ.ಒ.1 ಆಗಿರುತ್ತದೆ. ಆ ಸಮಯದಲ್ಲಿ ನಿಪಿ-12 ಮತ್ತು 13ರ ಫೋಟೋ ತೆಗೆಸಿರುತ್ತೇನೆ. ಅದೇ ದಿವಸ ಪಿರ್ಯಾದಿದಾರರ ಮುಂದುವರೆದ ಹೇಳಿಕೆ ಪಡೆದಿರುತ್ತೇನೆ. ಅವರು ನಿಪಿ-2 ರಂತೆ ನನ್ನ ಮುಂದೆ ಮುಂದುವರೆದ ಹೇಳಿಕೆ ನೀಡಿರುತ್ತಾರೆ. ಅದೇ ದಿನ ಮರಣೋತ್ತರ ಪರೀಕ್ಷಾ ವರದಿಯನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-20ರಂತೆ ಸ್ವೀಕರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-20(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಮಧ್ಯಾಹ್ನ 1 ರಿಂದ 2-30 ಗಂಟೆಗೆ ಆರೋಪಿತರನ್ನು ಕರೆದುಕೊಂಡು ಆರೋಪಿತರು ತೋರಿಸಿದ ಕಿತ್ತಗಳಲೆ ಗ್ರಾಮದ ಕೃತ್ಯನಡೆದ ಸ್ಥಳದವಾದ ಸದಾನಂದರವರ ಲೈನ್ ಮನೆಗೆ ಹೋದೆನು. ಅಲ್ಲಿ ಪಂಚರಾದ ಗಿರಿಜಾ ಮತ್ತು ಅಭಿನಂದನ್ ರವರ ಸಮಕ್ಷಮ ಪರಿಶೀಲನೆ ಮಾಡಿ ಆರೋಪಿಯು ತಾನು ಕೃತ್ಯಕ್ಕೆ ಬಳಸಿದ ಒಂದು ದೊಣ್ಣೆ ಮತ್ತು ಸುತ್ತಿಗೆಯನ್ನು ಹಾಗೂ ತಲಾ 90 ಎಂ ಎಲ್ ನ 2 ಖಾಲಿ ಟೆಟ್ರಾಪ್ಯಾಕುಗಳನ್ನು ಹಾಜರುಪಡಿಸಿದನು. ಸ್ಥಳದಲ್ಲಿ ಇದ್ದಂತಹ ಸಾದಾ ಮಣ್ಣು ಮತ್ತು ರಕ್ತಸಿಕ್ತ ಮಣ್ಣನ್ನು ತೆಗೆದುಕೊಂಡೆನು. ಅವೆಲ್ಲವನ್ನು ವಶಪಡಿಸಿಕೊಂಡು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-14 ರಂತೆ ಪಂಚನಾಮೆ ನಡೆಸಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-14(ಸಿ) ಎಂದು

ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಸ್ಥಳದಲ್ಲಿದ್ದ ರಕ್ತಸಿಕ್ತ ಮಣ್ಣು ಮತ್ತು ಸಾದಾ ಮಣ್ಣನ್ನು, ದೊಣ್ಣೆ, ಕಬ್ಬಿಣದ ಸುತ್ತಿಗೆ, 2 ಖಾಲಿ ಟೆಟ್ರಾ ಪ್ಯಾಕುಗಳನ್ನು ವಶಪಡಿಸಿಕೊಂಡೆನು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವೆಲ್ಲವೂ ನ್ಯಾಯಾಲಯದ ಮುಂದಿರುವ ಎಂ.ಒ.2 ರಿಂದ 6 ಆಗಿರುತ್ತವೆ. ಅವುಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಿಪಿ-14ರ ಪಂಚನಾಮೆ ಕಾಲದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಒಟ್ಟು 8 ಫೋಟೋಗಳಿದ್ದು ಅವುಗಳನ್ನು ನಿಪಿ-29 ರಿಂದ 36 ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಿಸಿದಂತೆ ಒಂದು ಸಿಡಿ ಹಾಜರುಪಡಿಸಿರುತ್ತೇನೆ. ಅದನ್ನು ತೆರೆದ ನ್ಯಾಯಾಲಯದಲ್ಲಿ ಪ್ಲೇ ಮಾಡಿ ನೋಡಿದಾಗ ಅದರಲ್ಲಿ ಯಾವುದೇ ಆಡಿಯೋ ವಿಡಿಯೋ ಇರುವುದು ಕಂಡುಬರುತ್ತಿಲ್ಲ, ಬದಲಾಗಿ folder empty ಎಂದು ಕಂಡುಬರುತ್ತಿದೆ. ಗುರುತಿಸುವಿಕೆಗಾಗಿ ಸಿಡಿಯನ್ನು ನಿಪಿ-37 ಎಂದು ಗುರುತಿಸಲಾಯಿತು. ಮಹಜರು ಕಾಲದಲ್ಲಿ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ನಿಪಿ18ರಂತೆ ತಯಾರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-18(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ಹಾಗೂ ವಶಪಡಿಸಿಕೂಂಡ ಮಾಲನ್ನು ತೆಗೆದುಕೊಂಡು ಠಾಣೆಗೆ ಬಂದು ಮಾಲುಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆರೋಪಿತರು ಮುಂದಿನ ತನಿಖೆಗೆ ಅವಶ್ಯಕತೆ ಇಲ್ಲದ್ದರಿಂದ ಆತನನ್ನು ಸಿಬ್ಬಂದಿಗಳ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿವಸ ಚಾಸಾ-2 ರಿಂದ 5 ರವರ ಹೇಳಿಕೆ ಮಾಡಿಕೊಂಡಿರುತ್ತೇನೆ. ಚಾಸಾ-2 ನಿಪಿ-3 ರಂತೆ ಚಾಸಾ-3ರವರು ನಿಪಿ-4ರಂತೆ ಚಾಸಾ-4ರವರು ನಿಪಿ-5ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ.

4.ದಿನಾಂಕ 13-6-22ರಂದು ಕೃತ್ಯಸ್ಥಳದ ಪಹಣಿ ನೀಡುವಂತೆ ತಹಶೀಲ್ದಾರರಿಗೆ ಮನವಿ ಸಲ್ಲಿಸಿದೆನು. ಅದೇ ದಿನ ಪಿಡಿಒರವರಿಗೂ ಸದಾನಂದರವರ ಮನೆಯ ಖಾತಾ ನಕಲನ್ನು ನೀಡುವಂತೆ ಮನವಿ ಸಲ್ಲಿಸಿದೆನು. ಅದೇ ದಿನ ಪಿಡಬ್ಲ್ಯೂಡಿ ಇಲಾಖೆಯವರಿಗೆ ಸ್ಥಳದ

ನಕ್ಷೆ ಮಾಡಿಕೊಡಲು ಮನವಿ ಸಲ್ಲಿಸಿದೆನು.

5.ದಿನಾಂಕ 18-6-22ರಂದು ವಶಪಡಿಸಿಕೊಂಡ ವಸ್ತುಗಳಲ್ಲಿ ಕೆಲವು ವಸ್ತುಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಚಾಸಾ-26ರವರ ಮೂಲಕ ಮೈಸೂರಿನ ಆರ್.ಎಫ್.ಎಸ್.ಎಲ್ ಗೆ ಕಳುಹಿಸಿರುತ್ತೇನೆ.

6.ದಿಃ22-6-22ರಂದು ತಹಶೀಲ್ದಾರರಿಂದ ಯುಡಿಆರ್ 31/22ರ ದಾಖಲೆಗಳನ್ನು ವಾಪಸ್ ಪಡೆದುಕೊಂಡೆನು.

7.ದಿನಾಂಕ 7-7-22ರಂದು ಪಿಡಬ್ಲ್ಯೂಡಿ ಇಲಾಖೆಯಿಂದ ನಿಪಿ-38ರಂತೆ ನಕಾಶೆಯನ್ನು ಲೋಕೋಪಯೋಗಿ ಇಲಾಖೆಯ ಎಇಇ ರವರ ನಿಪಿ-39ರ ಪತ್ರದೊಂದಿಗೆ ಸ್ವೀಕರಿಸಿರುತ್ತೇನೆ. ನಿಪಿ-39ರಲ್ಲಿ ನನ್ನ ರುಜು ಇದ್ದುನಿಪಿ-39(ಎ) ಎಂದು ಗುರುತಿಸಲಾಯಿತು.

8.ದಿನಾಂಕ 25-7-22ರಂದು ಆರೋಪಿ ಧರಿಸಿದ್ದ ಟೀಶರ್ಟ್ ಮತ್ತು ಸ್ಥಳದಲ್ಲಿ ವಶಪಡಿಸಿಕೊಂಡ ರಕ್ತಸಿಕ್ತ ಹಾಗೂ ರಕ್ತರಹಿತ ಮಣ್ಣನ್ನು ಮೈಸೂರಿನ ಆರ್,ಎಫ್.ಎಸ್ ಎಲ್ ಗೆ ಚಾಸಾ-26ರವರ ಮಾಲಕ ಕಳುಹಿಸಿಕೊಟ್ಟೆನು. ಚಾಸಾ-25 ಮತ್ತು 26ರವರಿಗೆ ಆರ್ ಎಫ್.ಎಸ್.ಎಲ್. ಗೆ ವಸ್ತುಗಳನ್ನು ಕೊಟ್ಟುಬರಲು ನಿಪಿ-40 ಮತ್ತು 41 ರಂತೆ ರಹದಾರಿ ನೀಡಿರುತ್ತೇನೆ. ಅದರಲ್ಲಿರುವ ನನ್ನ ರುಜುಗಳನ್ನು 40ಎ ಮತ್ತು 41 ಎ ಎಂದು ಗುರುತಿಸಲಾಯಿತು. ಚಾಸಾ-26ರವರು ಸದರಿ ವಸ್ತುಗಳನ್ನು ತಲುಪಿಸಿ ಸ್ವೀಕೃತಿಯನ್ನು ನಿಪಿ-42ರಂತೆ ತಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-42(ಎ) ಎಂದು ಗುರುತಿಸಲಾಯಿತು. ದಿನಾಂಕ 25-7-22ರಂದು RFSL ವರದಿಯನ್ನು

ನಿಪಿ-43 ರಂತೆ ಟಪಾಲಿನಲ್ಲಿ ಬಂದದ್ದು ಸ್ವೀಕರಿಸಿರುತ್ತೇನೆ. ಹಾಗೆಯೇ 10-8-22ರಂದು ಇನ್ನೊಂದು RFSL ವರದಿಯನ್ನು ನಿಪಿ-19ರಂತೆ ಸ್ವೀಕರಿಸಿರುತ್ತೇನೆ. ನಿಪಿ-43 ಮತ್ತು 19ರಲ್ಲಿ ನನ್ನ ರುಜುಗಳಿದ್ದು ಅವುಗಳನ್ನು ಕ್ರಮವಾಗಿ ನಿಪಿ-43(ಎ) ಮತ್ತು 19(ಎ) ಎಂದು ಗುರುತಿಸಲಾಯಿತು. ಅದೇದಿವಸ ಸದಾನಂದರವರ ಮನೆಯ ಪಹಣಿಯನ್ನು ನಿಪಿ-44ರಂತೆ ಸ್ವೀಕರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-44(ಎ) ಎಂದು ಗುರುತಿಸಲಾಯಿತು.

9.ದಿನಾಂಕ 8-8-22ರಂದು ಬೆಸ್ಕಾಂ ಇಲಾಖೆಗೆ ಕೃತ್ಯನಡೆದ ಸಮಯದಲ್ಲಿ ಸ್ಥಳದಲ್ಲಿ ವಿದ್ಯುತ್ ಇತ್ತೋ ಇಲ್ಲವೋ ಎನ್ನುವ ಬಗ್ಗೆ ಮಾಹಿತಿ ಕೊಡುವಂತೆ ಮನವಿ ಸಲ್ಲಿಸಿರುತ್ತೇನೆ. ದಿನಾಂಕ 30-8-22ರಂದು ಬೆಸ್ಕಾಂ ನಿಂದ ಕೃತ್ಯಸ್ಥಳದಲ್ಲಿ ಕೃತ್ಯನಡೆದ ಸಮಯದಲ್ಲಿ ಆ ದಿನಾಂಕದಂದು ವಿದ್ಯುತ್ ಸೌಲಭ್ಯ ಇತ್ತು ಎನ್ನುವ ಬಗ್ಗೆ ನೀಡಿದ ವರದಿಯನ್ನು ಸ್ವೀಕರಿಸಿರುತ್ತೇನೆ.

10.ತನಿಖಾ ಕಾಲದಲ್ಲಿ ತೆಗೆದ ಫೋಟೋಗಳಿಗೆ ಸಂಬಂಧಿಸಿದಂತೆ ನಂದೀಶ ರವರಿಂದ ಭಾ.ಸಾ.ಅ.ನಿ. ಕಲಂ 65ಬಿ ಅನ್ವಯ ದೃಢಪತ್ರವನ್ನು ಸ್ವೀಕರಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-45 ಎಂದು ಸಾಕ್ಷಿಯ ರುಜುವನ್ನು ನಿಪಿ-45(ಎ) ಎಂದು ಗುರುತಿಸಲಾಯಿತು.

11.ಮರಣೋತ್ತರ ಪರೀಕ್ಷಾ ಸಮಯದಲ್ಲಿ ವೈದ್ಯರ ಮೂಲಕ ಡಿಎನ್‌ಎ ಪರೀಕ್ಷೆಗಾಗಿ ಮೃತನ ರಕ್ತ ಹಾಗೂ ತೊಡೆಮೂಳೆಯನ್ನು ಸಂಗ್ರಹಿಸಿಕೊಡುವಂತೆ ಕೋರಿಕೊಂಡಿದ್ದೆನು. ಅದರಂತೆ ವೈದ್ಯರು ರಕ್ತವನ್ನು ಮತ್ತು ತೊಡೆಮೂಳೆಯನ್ನು ಸಂಗ್ರಹಿಸಿಕೊಟ್ಟಿದ್ದನ್ನು ಪಿಎಫ್ ನಲ್ಲಿ ಅಳವಡಿಸಿಕೊಂಡು ಚಾಸಾ-27ರವರ ಮೂಲಕ ಬೆಂಗಳೂರಿನ ಎಫ್.ಎಸಎಲ್. ಕಛೇರಿಗೆ ಕಳುಹಿಸಿದ್ದೆನು. ಎಫ್.ಎಸ್.ಎಲ್. ಕಛೇರಿಯಲ್ಲಿ ಮೃತನ ರಕ್ತಸಂಬಂಧಿಗಳ ರಕ್ತ ಸಂಗ್ರಹಣೆ

ಮಾಡಿ ಕಳುಹಿಸಿಕೊಡುವಂತೆ ನಮಗೆ ಕೇಳಿಕೊಂಡಿದ್ದರು. ಆ ಪತ್ರವನ್ನು ಈಗ ನೋಡುತ್ತಿದ್ದು ನಿಪಿ-46 ಎಂದು ಗುರುತಿಸಲಾಯಿತು. ಆ ಪತ್ರ ಬಂದ ನಂತರ ನಾನು ಮೃತರ ಸಂಬಂಧಿಕರನ್ನು ಪತ್ತೆಹಚ್ಚಲು ಪ್ರಯತ್ನಿಸಿದೆನು, ಆದರೆ ಸಿಗಲಿಲ್ಲ. ತನಿಖೆ ಮುಕ್ತಾಯಗೊಂಡಿದ್ದು ಆರೋಪಿತರ ವಿರುದ್ಧ ಸಾಕ್ಷ್ಯಾಧಾಗಳು ಇದ್ದ ಕಾರಣ ದೋ.ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಹೆಚ್ ಜೆ ಆರ್ ವಕೀಲರಿಂದಃ**

ನಿಪಿ-21ರಲ್ಲಿ ಪ್ರಸನ್ನ, ಮಂಜು ಮತ್ತು ರಾಜುರವರ ಜೊತೆ ಕಳುಹಿಸಿಕೊಟ್ಟದ್ದು ಎಂದು ಹೇಳಿರುತ್ತಾರೆ ಎಂದರೆ ಸರಿ. ಅದರಂತೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೆ ಅಲ್ಲಿ ವೈದ್ಯರು ಮೃತಪಟ್ಟಿರುವುದಾಗಿ ಹೇಳುತ್ತಾರೆ ನಂತರ ವಾಪಸ್ ಮೃತದೇಹವನ್ನು ತೆಗೆದುಕೊಂಡು ಬಂದೆವೆಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದಾನಂದರವರು ತಾನು ಆಟೋದಲ್ಲಿ ಮೃತದೇಹವನ್ನು ತೆಗೆದುಕೊಂಡು ಬರುತ್ತಿದ್ದೆ ಆತ ಮೃತಪಟ್ಟದ್ದರಿಂದ ಭಯವಾಗಿ ಅಲ್ಲೇ ರಸ್ತೆಪಕ್ಕದ ಮರದ ಹತ್ತಿರ ಮಲಗಿಸಿದೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಯಾವುದೇ ಆಸ್ಪತ್ರೆಯಲ್ಲಿ ಮೃತದೇಹವನ್ನೇ ಕೊಂಡುಹೋದಲ್ಲಿ ಅದನ್ನು ವಾಪಸ್ ಕೊಡುವುದಿಲ್ಲ ಎಂದರೆ ಸಾಕ್ಷಿಯು ಎಂಎಲ್ ಸಿ ಆಗಿದ್ದಲ್ಲಿ ಕೊಡುವುದಿಲ್ಲ ಎನ್ನುತ್ತಾರೆ.

2.8ನೇ ತಾರೀಖಿನಂದು ಪ್ರಸನ್ನ ನನ್ನ ಮುಂದೆ ಹಾಜರಾಗಿ ಹೇಳಿಕೆ ನೀಡಿರುತ್ತಾರೆ. ಸದರಿ ಹೇಳಿಕೆಯಲ್ಲಿ ಹೊರಗಡೆ ಮೃತದೇಹ ಇತ್ತು, ಸತೀಶನ ಜೊತೆ ಉಳಿದವರೆಲ್ಲರೂ ಮಲಗಿದ್ದರು ನಾನೇ ಹೋಗಿ ಅವರೆಲ್ಲರನ್ನು ಎಬ್ಬಿಸಿದೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ದೋ.ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದೊಣ್ಣೆ ಮತ್ತು ಸುತ್ತಿಗೆಯಲ್ಲಿ ರಕ್ತದ ಕಲೆಗಳು ಇದ್ದವು ಎನ್ನುವುದನ್ನು ಮಹಜರಿನಲ್ಲಿ ಕಾಣಿಸಿಲ್ಲ ಮತ್ತು ಅವುಗಳಲ್ಲಿ ರಕ್ತದ ಕಲೆಗಳಿರಲಿಲ್ಲ ಎಂದರೆ ಸರಿಯಲ್ಲ.

3.ಡಿಎನ್ಎಗೆ ರಕ್ತ ಮತ್ತು ಮೂಳೆ ಸಂಗ್ರಹಿಸಲು ಕೊಟ್ಟ ಮನವಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

4.ಮೃತನ ಹೆಸರು ಆನಂದ ಎನ್ನುವ ಬಗ್ಗೆ ಮತ್ತು ಆತನ ವಿಳಾಸ ಸಂಬಂಧಿಕರು ಯಾರು ಎಂಬ ಬಗ್ಗೆ ಇವತ್ತಿನವರೆಗೂ ಮಾಹಿತಿ ಸಂಗ್ರಹಿಸಿದ್ದೇನಾ ಎಂದರೆ ಸಾಕ್ಷಿಯು ಸಂಬಂಧಿಕರು ಪತ್ತೆಯಾಗಿರುವುದಿಲ್ಲ, ಆತನ ಸ್ನೇಹಿತ ಹೇಳಿದ್ದರಿಂದ ಹೆಸರು ಆನಂದ ಎಂದು ಹೇಳಿರುತ್ತೇನೆ ಎನ್ನುತ್ತಾರೆ. ಆ ಸ್ನೇಹಿತ ಯಾರೆಂದರೆ ರಾಜು ಮತ್ತು ಮಂಜು. ಚಾಸಾ-2 ರಿಂದ 4 ರವರು ಯಾರೂ ಕೂಡ ನನ್ನ ಮುಂದೆ ನಿಪಿ-3 ರಿಂದ 5 ರಂತೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ಎಲ್ಲಾ ಮಹಜರುಗಳನ್ನು ಠಾಣೆಯಲ್ಲಿ ಸೃಷ್ಟಿಸಿದ್ದು ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ ಆರೋಪಿತರಿಗೂ ಮೃತರಿಗೂ ದೋಷ ಇತ್ತು ಎನ್ನುವ ಹೇಳಿಕೆಯನ್ನು ನನ್ನ ಮುಂದೆ ಯಾರೂ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ ಆರೋಪಿತ ತಪ್ಪು ಮಾಡಿಲ್ಲ ಎಂದು ಕಂಡುಬಂದರೂ ಸಹ ಸುಳ್ಳು ದೋ.ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**